ಸಿವಿಲ್ ನ್ಯಾಯಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಲಯ, ಬೇಲೂರು

ಕ್ರೀ ಮಿಸ್ ಸಂಖ್ಯೆ: 224/2019
ಆರ್ ಡಬ್ಲ್ಯೂ ನಂ: 1

ಸತ್ಯ ಪ್ರತಿಜ್ಞೆಯ ಮೇರೆಗೆ, ದಿನಾಂಕ: **18.06.2026.**

ಪಾಟೀಸವಾಲು: ಅರ್ಜಿದಾರರ ಪರ ವಕೀಲರಾದ ಶ್ರೀ ಬಿ ವಿ ಎನ್ ರವರಿಂದ

ನಾನು ಎಂ.ಎ ಬಿಇಡಿ ಸ್ನಾತಕೋತ್ತರ ಪದವೀಧರ ಇರುತ್ತೇನೆ. ಅಲ್ಪಸ್ವಲ್ಪ ಕಾನೂನಿನ ಬಗ್ಗೆ ಅರಿವು ಇರುತ್ತದೆ. ನ್ಯಾಯಾಜ್ಞೆಯನ್ನು ಗೌರವಿಸಬೇಕೆಂದರೆ ಸರಿ. ಈ ಪ್ರಕರಣದಲ್ಲಿ ಮಧ್ಯಂತರ ಅರ್ಜಿಯ ಮೇಲೆ ನ್ಯಾಯಾಲಯ ಅರ್ಜಿದಾರರಿಗೆ ಮಧ್ಯಂತರ ಜೀವನಾಂಶ ಕೊಡಬೇಕೆಂದು ಆದೇಶ ಮಾಡಿರುತ್ತದೆ. ಸದರಿ ಮಧ್ಯಂತರ ಜೀವನಾಂಶ ಪಡೆದುಕೊಳ್ಳಲು ಅರ್ಜಿದಾರರು ಅರ್ಜಿ ಸಲ್ಲಿಸಿರುತ್ತಾರೆ.

ನಾನು **2014** ರಲ್ಲಿ ಸರ್ಕಾರಿ ಉದ್ಯೋಗವಾದ ದ್ವಿತೀಯ ದರ್ಜೆ ಸಹಾಯಕ ಹುದ್ದೆಗೆ ಸೇರಿರುತ್ತೇನೆ. ನನಗೆ ಆ ಸಮಯದಲ್ಲಿ ಮಾಸಿಕ **12000/-** ವೇತನ ಬರುತ್ತಿತ್ತು. ಈಗ ನನಗೆ ಪನಿಶ್ ಮೆಂಟ್ ವರ್ಗಾವಣೆಯಗಿ ಜಿಲ್ಲಾ ಪಂಚಾಯತಿಯಲ್ಲಿ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದೇನೆ. ಈಗ ಎಲ್ಲ ಕಡಿತಗೊಂಡು **30,000/-** ವೇತನ ಬರುತ್ತಿದ್ದು, ಕಳೆದ **8** ತಿಂಗಳಿಂದ ಸಂಬಳ ಆಗಿರುವುದಿಲ್ಲ. ಕಡಿತಗೊಂಡ ವೇತನವು ಸೇರಿ ನನಗೆ ಒಟ್ಟು **90,000/-** ಸಂಬಳ ಬರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು **45,000/-** ಬರುತ್ತದೆ ಎಂದು ನುಡಿಯುತ್ತಾರೆ. ನ್ಯಾಯಾಲಯದಲ್ಲಿ ನನ್ನ ವೇತನವನ್ನು ಘೋಷಣೆ ಮಾಡಿಕೊಂಡಿಲ್ಲ. ನನಗೆ ಯಾವುದೇ ಮದ್ಯಪಾನದ ಚಟ ಇರುವುದಿಲ್ಲ.

ನಮ್ಮ ತಂದೆಗೆ **72** ವರ್ಷ ವಯಸ್ಸಾಗಿರುತ್ತದೆ. ನನ್ನ ತಂದೆ ರೈಲ್ವೆ ಇಲಾಖೆಯಲ್ಲಿ ನೌಕರಿಯಲ್ಲಿರುತ್ತಾರೆ ಎಂದರೆ ಸರಿಯಲ್ಲ. ಇತರೆಯವರು ಸರ್ಕಾರಿ ಕೆಲಸ ಮಾಡುತ್ತಿಲ್ಲ. ನನಗೆ ಒಬ್ಬ ಸಹೋದರ ಮತ್ತು ಸಹೋದರಿ ಇರುತ್ತಾರೆ. ಅವರ ವಿವಾಹ ಆಗಿರುತ್ತದೆ. ನನ್ನ ತಮ್ಮ ಕೂಲಿ ಕೆಲಸ ಮಾಡುತ್ತಾನೆ. ನನ್ನ ತಂದೆಯ ಹೆಸರು ಹೆಚ್ ರಾಮಪ್ಪ. ನನ್ನ ಅಜ್ಜನ ಹೆಸರು ಹನುಮಯ್ಯ. ಸಾಕ್ಷಿಗೆ ಸರ್ವೆ ನಂಬರ್ **155/4** ಕಡೂರಹಳ್ಳಿ ಗ್ರಾಮದ ಆಸ್ತಿ ತನ್ನ ತಂದೆಯ ಹೆಸರಿನಲ್ಲಿರುತ್ತದೆ ಎಂದರೆ ಸಾಕ್ಷಿ ನನ್ನ ತಂದೆಯದೆಂದು ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ನಾನು 1ನೇ ಅರ್ಜಿದಾರರನ್ನು ವಿವಾಹವಾದ ನಂತರ ಕಡೂರಹಳ್ಳಿಯಲ್ಲಿ **7-8** ವರ್ಷಗಳ ಕಾಲ ಇದ್ದೆ. ಆನಂತರ ಶಿವಮೊಗ್ಗದಲ್ಲಿ ನನಗೆ ಉದ್ಯೋಗ ಸಿಕ್ಕಿತ್ತು. ಶಿವಮೊಗ್ಗದಲ್ಲಿ **2** ವರ್ಷ ಇದ್ದೆ. ಆನಂತರ

ಚಿಕ್ಕಮಗಳೂರಿಗೆ 2018 ರಲ್ಲಿ ಬಂದಿರುತ್ತೇನೆ. ಈ ಚಿಕ್ಕಮಗಳೂರಿನಲ್ಲಿರುತ್ತೇನೆ. ನಮ್ಮ ಕುಟುಂಬಕ್ಕೆ ಸೇರಿದ ಕಡೂರಹಳ್ಳಿ ಗ್ರಾಮದ ಆಸ್ತಿಗಳ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಗ್ರಾಮದಲ್ಲಿ ಹೊಸ ಮನೆ ಕಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ತಂದೆಯ ಹೆಸರಿನಲ್ಲಿ ಒಂದು ಮನೆ ಇರುತ್ತದೆ. ನನ್ನ ಕುಟುಂಬದವರ ಹೆಸರಿನಲ್ಲಿ 2 ಕಾರುಗಳು ಇರುತ್ತವೆ ಎಂದರೆ ಸರಿಯಲ್ಲ.

ನನಗೆ ಯಾವುದಾದರೂ ಪತ್ರ ಬಂದರೆ ನೌಕರನಾಗಿರುವ ಕಾರಣ, ಉತ್ತರ ಕೊಡಬೇಕಾಗುತ್ತದೆ ಎಂದರೆ ಸರಿ. ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ತಕರಾರಿನಲ್ಲಿ ಏನು ಬರೆದಿದೆ ಎಂದು ನೆನಪಿಲ್ಲ. ವಕೀಲರ ಮೂಲಕ ಎಷ್ಟು ದಾಖಲೆಗಳನ್ನು ಹಾಜರುಪಡಿಸಿದ್ದೇನೆಂದು ನೆನಪಿಲ್ಲ. ನಿಆರ್-5 ಛಾಯಾಚಿತ್ರವನ್ನು ಸವದತ್ತಿಗೆ ಹೋಗಿ ಬರುವ ಮಾರ್ಗ ಮಧ್ಯದ ದೇವಸ್ಥಾನದ ಹತ್ತಿರ ತೆಗೆದಿರುತ್ತೇವೆ. ಸದರಿ ಫೋಟೋದಲ್ಲಿ ಅರ್ಜಿದಾರರ ಪಕ್ಕದಲ್ಲಿ ನಿಂತಿರುವವರ ಹೆಸರು ಚೈತ್ರ ಇರುತ್ತದೆ. ಸದರಿ ಚೈತ್ರ ಅವರ ಗಂಡನ ಕಡೆಯಿಂದ ಪರಿಚಯ ಆಗಿರುತ್ತಾರೆ. ಚೈತ್ರ ಮತು ರವಿ ರವರ ಪರಿಚಯ ಶಿವಮೊಗ್ಗಕ್ಕೆ ಹೋದಾಗ ಆಗಿರುತ್ತದೆ ಎಂದರೆ ಸಾಕ್ಷಿ ರವಿರವರ ಪರಿಚಯ ಬಿಇಡಿ ಮಾಡುವಾಗ ಆಗಿರುತ್ತದೆ ಎಂದು ನುಡಿಯುತ್ತಾರೆ.

ಈ ಪ್ರಕರಣ ದಾಖಲಿಸಿದ ನಂತರ 1ನೇ ಆರ್ಜಿದಾರರ ಹತ್ತಿರ ಮಕ್ಕಳನ್ನು ನೋಡಲು ಮನೆಯ ಹತ್ತಿರ ಹೋಗಿದ್ದೆ. ನನ್ನ ಮಕ್ಕಳ ಶಾಲಾ ಶುಲ್ಕವನ್ನು ಕಟ್ಟಿದ ಬಗ್ಗೆ ದಾಖಲೆಯನ್ನು ವಕೀಲರ ಹತ್ತಿರ ಕೊಟ್ಟಿದ್ದೆ. ಕಲ್ಪತರು ಹಾಗೂ ಸರ್ಕಾರಿ ಶಾಲೆಗೆ ಕಟ್ಟಿದ್ದ ಶುಲ್ಕದ ದಾಖಲೆ ಇರುತ್ತದೆ. ಹಳೇಬೀಡಿಗೆ ಹೋದಾಗ ಮಕ್ಕಳ ಮತ್ತು 1ನೇ ಅರ್ಜಿದಾರರು ಬಾಡಿಗೆ ಇದ್ದ ಮನೆಯ ಛಾಯಾಚಿತ್ರ ತೆಗೆದುಕೊಂಡಿರುತ್ತೇನೆ. ನಾನು ಚೈತ್ರ ರವರೊಂದಿಗೆ ಹೆಚ್ಚು ಮಾತನಾಡುತ್ತಿದ್ದ ಬಗ್ಗೆ 1ನೇ ಅರ್ಜಿದಾರರು ಎಚ್ಚರಿಕೆ ಕೊಟ್ಟಿದ್ದರು ಎಂದರೆ ಸರಿಯಲ್ಲ. ನಾನು ಚೈತ್ರರೊಂದಿಗೆ ಹೆಚ್ಚು ಮಾತನಾಡುತ್ತಿದ್ದ ಬಗ್ಗೆ 1ನೇ ಅರ್ಜಿದಾರರು ಪ್ರಶ್ನಿಸಿದ ಕಾರಣ, ನಾನು ದೂರು ದಾಖಲಿಸಿದ್ದೆ ಎಂದರೆ ಸರಿಯಲ್ಲ.

ನಿಆರ್-9 ದೂರನ್ನು ದಿಃ 12.11.2019 ರಂದು ಚೈತ್ರರವರು ಕೊಡಿಸಿರುತ್ತೀರಿ ಎಂದರೆ ಅವರ ಗಂಡ ಕೊಡಿಸಿರುತ್ತಾರೆ ಎಂದು ಸಾಕ್ಷಿ ಮುಂದುವರೆದು ಹೇಳುತ್ತಾರೆ. ಚೈತ್ರ ರವರ ವಿಚಾರದಲ್ಲಿ ಗಲಾಟೆ ಆಗಿದ್ದಕ್ಕೆ ಸಂಬಂಧಿಸಿದಂತೆ ಸಖರಾಯಪಟ್ಟಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದೆ ಎಂದರೆ ಸರಿಯಲ್ಲ. ಈ ಗಲಾಟೆ ಪ್ರಾರಂಭವಾದ ನಂತರ 1ನೇ ಅರ್ಜಿದಾರರ ವಿರುದ್ಧ ವಿವಾಹ ವಿಚ್ಛೇದನ ಕೋರಿ ಅರ್ಜಿ ಸಲ್ಲಿಸಿರುತ್ತೀರಿ ಎಂದರೆ ಸಾಕ್ಷಿ ದಾಂಪತ್ಯದ ಹಕ್ಕುಗಳ ಪುನರ್ ಸ್ಥಾಪನೆಗಾಗಿ ಅರ್ಜಿ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಎಂ.ಸಿ 50/2019 ಪ್ರಕರಣದ

ದಾಖಲೆ ತೋರಿಸಿ ಸದರಿ ಪ್ರಕರಣ ದಾಖಲಿಸಿರುತ್ತೀರ ಎಂದರೆ ಹೌದು ಎಂದು ಒಪ್ಪಿದ ಕಾರಣ, ನಿಪಿ-5 ಎಂದು ಗುರುತಿಸಲಾಯಿತು.

(ಅರ್ಜಿದಾರರ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಶ ಕೋರಿದ್ದು, ಸಮಯ ನೀಡಲಾಯಿತು )

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

(ನಾಗೇಂದ್ರ)
ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ನ್ಯಾಯಾಲಯ, ಬೇಲೂರು